ಒಮ್ಮೊಮ್ಮೆ ಆತ್ಮೀಯನಾಗುವ ನಮ್ಮ ಸ್ಥಳೀಯ ಸಮಾಜಶಾಸ್ತ್ರಿ ಚಿಲಕಯ್ಯ ಆಗೊಮ್ಮೆ ಈಗೊಮ್ಮೆ ತನ್ನ ತಕರಾರು ಎತ್ತದೆ ಇರುವುದಿಲ್ಲ. 'ನೋಡಪ್ಪಾ, ಗಂಡುಹೆಣ್ಣಿನ ಮದುವೆಗೆ ಈ ಜಾತಿ ಪದ್ಧತಿ ಅನುಕೂಲವಲ್ಲವೆ? ಒಂದೇ ಜಾತಿಲಿ ಮದುವೆಯಾದರೆ ಆಚಾರ, ವಿಚಾರ, ಊಟ–ತಿಂಡಿ, ದೇವರು, ದಿಂಡರು, ಹಬ್ಬಹರಿದಿನ ಇಂಥವೆಲ್ಲ ಯಾವ ಗೊಣಗಾಟವೂ ಇಲ್ಲದೆ ಸಲೀಸಾಗಿ ಆಗೊಲ್ಲವೆ? ಅದರಿಂದ ಗಂಡುಹೆಣ್ಣಿಗೆ ಮಾತ್ರವಲ್ಲ, ಅವರಿಬ್ಬರ ತಂದೆತಾಯಿ ಮತ್ತು ನಂಟರಿಷ್ಟರ ಮನಸ್ಸಿಗೂ ಶಾಂತಿ ಸಿಗುವುದಿಲ್ಲವೆ? ಬದುಕಿರುವವರೆಗೆ ನೆಮ್ಮದಿಯಿಂದ ಇರಬಹುದು. ಇನ್ನು ಇದಕ್ಕಿಂತ ಆಗಬೇಕಾದ್ದೇನಿದೆ? ಇಂಥ ಅನುಕೂಲಗಳು ಈ ಜಾತಿಪದ್ಧತಿಯಿಂದ ಬೇಕಾದಷ್ಟು ಆಗುತ್ತವೆ. ಸಮಾಜದಲ್ಲಿ ನೆಮ್ಮದಿ ಸಿಗುತ್ತದೆ. ಅಂಥದ್ರಲ್ಲಿ ನಿಮ್ಮಂಥವರು ವಿನಾಕಾರಣ ಈ ಜಾತಿ ಬಗ್ಗೆ ಇಲ್ಲಸಲ್ಲದ ಗುಲ್ಲು ಎಬ್ಬಿಸಿ ಸಮಾಜದಲ್ಲಿ ಯಾಕೆ ಅಶಾಂತಿಯನ್ನು ಹುಟ್ಟುಹಾಕುತ್ತೀರಿ?...' ಇತ್ಯಾದಿ ತಕರಾರಿನ ಪ್ರಶ್ನೆಗಳನ್ನು ಹಾಕೇಹಾಕುತ್ತಾನೆ. ಅವನ ಪ್ರಶ್ನೆಗಳಿಗೂ ಗೋಣು ಹಾಕುವವರು ನಮ್ಮ ಸಮಾಜದಲ್ಲಿ ಇದ್ದೇ ಇದ್ದಾರಲ್ಲ? ಈ ಸಂದರ್ಭದಲ್ಲಿ 'ಅಪಾರವಾದ ಜನಸಂಖ್ಯೆ, ಸ್ವಾರ್ಥ, ಅವಿದ್ಯೆ ಮತ್ತು ಮೌಢ್ಯ ತುಂಬಿದ ಈ ದೇಶದಲ್ಲಿ ಯಾವುದೇ ವಿಷಯದಲ್ಲಿ ಏಕಾಭಿಪ್ರಾಯಕ್ಕೆ ಬರುವುದು ಬಹು ಕಷ್ಟಕಣ್ರಿ' ಅಂತ ನಮ್ಮ ಗುರುಗಳಾಗಿದ್ದ ಚಿಂತನಾಶೀಲ ವ್ಯಕ್ತಿತ್ವದ ಸುಜನಾ ಅವರು ಆಗಾಗ್ಗೆ ಹೇಳುತ್ತಿದ್ದ ಮಾತುಗಳು ನೆನಪಿಗೆ ಬರದೆ ಇರುವುದಿಲ್ಲ. ನಿಜ, ಚಿಲಕಯ್ಯ ಹೇಳುವುದರಲ್ಲಿ ಆಂಶಿಕ ಸತ್ಯವಿದೆ. ಆದರೆ, ಸಾರ್ವತ್ರಿಕವಾದ ಮತ್ತು ಸಾರ್ವಕಾಲಿಕವಾದ ಸತ್ಯವಿಲ್ಲ. ಕೊಂಚ ಹೀಗೆ ಯೋಚಿಸಿ ನೋಡೋಣ. ಒಂದು ಜಾತಿಯ ವೃತ್ತದೊಳಗೆ ಅಥವಾ ಅದರ ಮಿತಿಯಲ್ಲಿ ಒಂದಿಷ್ಟು ವ್ಯಕ್ತಿಗತವಾದ ಅನುಕೂಲಗಳಿವೆ ಅನ್ನುವುದನ್ನು ಒಪ್ಪಬಹುದಾದರೂ, ಒಟ್ಟು ಸಮಾಜ ಒಂದು ಜಾತಿಯ ವ್ಯಾಪ್ತಿಯಲ್ಲಿಲ್ಲ. ಅದರೊಳಗೆ ಸಾವಿರಾರು ಜಾತಿ, ಉಪಜಾತಿಗಳು ಸೇರಿಕೊಂಡಿವೆ ಎಂಬುದನ್ನು ನಾವು ಮರೆಯಬಾರದು. ಸಾಮಾಜಿಕವಾದ, ಔದ್ಯೋಗಿಕವಾದ, ರಾಜಕೀಯವಾದ, ಸಾಂಸ್ಕೃತಿಕವಾದ ಇಂಥ ಅನೇಕಾನೇಕ ವಿಷಯಗಳಲ್ಲಿ ಎಲ್ಲ

